<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಪಾಟೀ ಸವಾಲುಃ - ಶ್ರೀ. ವೈ.ಆರ್.ಕೆ. ವಕೀಲರಿಂದ ಪ್ರತಿವಾದಿಯವರ ಪರವಾಗಿ</u>

19. 2017 ರಲ್ಲಿ ಕರಾರು ಪತ್ರ ಮಾಡಿದಾಗಿನಿಂದ ಪ್ರತಿವಾದಿಯವರು ನನಗೆ ಪರಿಚಯ. ಅದಕ್ಕಿಂತ ಮೊದಲು ಅವರು ನನಗೆ ಪರಿಚಯ ಇಲ್ಲ. ಪ್ರತಿವಾದಿಯವರೊಂದಿಗೆ ಕರಾರು ಆದಾಗ ನಾನು ಹಾಗೂ ಟಿಮ್ ಪೋರ್ ಡೆವಲಪರ್ಸನ ಇತರೆ ಪಾಲುಗಾರರು ಸಹಃ ಪಕ್ಷಗಾರರು. ನಮಗೆ ಕರಾರು ಮಾಡಿಕೊಟ್ಟ ಜಾಗ ಪ್ರತಿವಾದಿಯವರಿಗೆ ಎಲ್.ಆರ್.ವೈ. ಮುಖಾಂತರ ಬಂದಿರುತ್ತದೆ. ಅಂದರೆ ಭೂ ನ್ಯಾಯ ಮಂಡಳಿಯಿಂದ ಆದೇಶವಾದ ಜಾಗ ಎಂದರೆ ಸರಿ. ಸದರಿ ಮಂಜೂರಾತಿ ಪತ್ರದಲ್ಲಿ ಆಸ್ತಿಯನ್ನು ಮಾರಾಟ ಮಾಡಲು ನಿರ್ಬಂದ ಇದೆ ಎಂದರೆ ಸಾಕ್ಷಿಯು ವಕೀಲರಾದ ಶ್ರೀ. ಶಶಿಕಿರಣ ಜೈನ ರವರು ಖರೀದಿ ಮಾಡಬಹುದು ಎಂದು ಹೇಳಿದ್ದರು ಎಂದು ಹೇಳುತ್ತಾರೆ. ಸದರಿ ವಕೀಲರ ಸಲಹೆಯ ಮೇರೆಗೆ ನೀವು ಕ್ರಯ ಪತ್ರ ಮಾಡಿಕೊಳ್ಳಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಪ್ರತಿವಾದಿಯವರು ನಕ್ಷೆ ಹಾಗೂ ಆರ್.ಟಿ.ಸಿ.ಯನ್ನು ಬದಲಾಯಿಸಿ ಕೊಡುತ್ತೇವೆ ಎಂದು ಹೇಳಿದ್ದರು ಆದರೆ ಮಾಡಿಸಿಕೊಡಲಿಲ್ಲ ಎಂದು ಹೇಳುತ್ತಾರೆ.

20. ನಮ್ಮ ಪಾಲುಗಾರಿಕೆಯಲ್ಲಿ ನಾನು, ಮೃತ ನಿಲಕಂಠನ್, ಷಣ್ಮುಗನಾಥನ್ ಹಾಗೂ ಆಸಿಫ್ ರವರು ಪಾಲುದಾರರು. ಈ ದಾವೆ ದಾಖಲಿಸುವ ಸಂದರ್ಬದಲ್ಲಿ ನಿಲಕಂಠನ್ ರವರ ವಾರಸೂದಾರರಿಗೆ ಮಾಹಿತಿ ತಿಳಿಸಿರುತ್ತೇವೆ. ಆ ಬಗ್ಗೆ ದಾಖಲಾತಿ ಇರುವುದಿಲ್ಲ. ಆಸ್ತಿಯನ್ನು ಖರೀದಿ ಮಾಡಲು ಯಾವುದಾದರೂ ನಿರ್ಬಂದ ಇದೆಯೋ ಇಲ್ಲವೋ ಎಂದು ನಾನು ಬೇರ ವಕೀಲರಿಂದ ಮತ್ತೊಂದು ಸಲಹೆ ಪಡೆದಿರುವುದಿಲ್ಲ. ನಾನು ಸಿವಿಲ್ ವಿಭಾಗದಲ್ಲಿ ಡಿಪ್ಲೋಮಾ ವ್ಯಾಸಂಗ ಮಾಡಿರುತ್ತೇನೆ. ನಿರ್ಬಂದ ಇರುವ ಜಾಗಕ್ಕೆ ಕರಾರು ಮಾಡಬಾರದು ಎಂಬ ವಿಚಾರ ನನಗೆ ಗೊತ್ತಿಲ್ಲ.

21. ಕರಾರು ಪತ್ರ ಆಗುವಾಗ ಮುಂಗಡ ಹಣವನ್ನು ನಾನೇ ನೀಡಿರುತ್ತೇನೆ ಹಾಗಾಗಿ ನಮ್ಮ ಸಂಸ್ಥೆಯ ಇತರೆ ಪಾಲುದಾರರು ಈ ದಾವೆಯಲ್ಲಿ ಪಕ್ಷಗಾರರು ಅಲ್ಲ. ಒಟ್ಟು ರೂ. 15,00,000/- ಹಣವನ್ನು ನಾನು ಮುಂಗಡವಾಗಿ ಪ್ರತಿವಾದಿಯವರಿಗೆ

ನೀಡಿರುವ ಬಗ್ಗೆ ಕರಾರು ಪತ್ರ ಅಲ್ಲದೇ ಚೆಕ್ಕಿನ ದಾಖಲಾತಿಗಳು ಇವೆ. ಸದರಿ ಚೆಕ್ಕಗಳು ಮಾನ್ಯಗೊಂಡು ಪ್ರತಿವಾದಿಯವರು ಹಣವನ್ನು ನಗದೀಕರಿಸಿರುತ್ತಾರೆ. ಆ ಬಗ್ಗೆ ದಾಖಲಾತಿ ಇದೆ. ನಾನು ನೀಡಿದ ಎರಡು ಚೆಕ್ಕಗಳು ಅಮಾನ್ಯಗೊಂಡಿವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸ್ಟೇಟಮೆಂಟ್ ಅನ್ನು ಹಾಜರು ಪಡಿಸಿದ್ದೇನೆ ಎಂದು ಹೇಳುತ್ತಾರೆ. ಸಾಕ್ಷಿಗೆ ಅವರು ಹಾಜರು ಪಡಿಸಿರುವ ದಾಖಲಾತಿಗಳನ್ನು ತೋರಿಸಲಾಗಿ ಅವುಗಳಲ್ಲಿ ಆ ದಾಖಲಾತಿ ಇಲ್ಲ ಎಂದು ಹೇಳುತ್ತಾರೆ.

22. ನಮ್ಮ ಟಿಮ್ ಪೋರ್ ಡೆವಲಪರ್ಸ‌ನ ಕಚೇರಿ ವಿಘ್ನೇಶ್ ಸಿಟಿ ಬಿಲ್ಡಿಂಗ್ ನಲ್ಲಿ ಇದೆ. ಅದರ ಉಸ್ತುವಾರಿಯನ್ನು ಎಲ್ಲಾ ಪಾಲುದಾರರು ಸೇರಿ ನೋಡಿ ಕೊಳ್ಳುತ್ತೇವೆ. ನಿಪಿ 1 ರ ಷರತ್ತುಗಳ ಪ್ರಕಾರ ದಿನಾಂಕಃ 10.10.2019 ರ ಒಳಗೆ ಕರಾರು ಪತ್ರ ಮಾಡಬೇಕಾಗಿತ್ತು. ಸದರಿ ದಿನಾಂಕಕ್ಕೆ ನಮ್ಮ ಬಳಿ ಉಳಿಕೆ ಕ್ರಯದ ಮೊತ್ತ ರೂ. 80,00,000/- ಇದ್ದ ಬಗ್ಗೆ ದಾಖಲಾತಿ ಇದೆ. ಆ ಬಗ್ಗೆ ನಮ್ಮ ಅಕೌಂಟನಲ್ಲಿ ಹಣ ಇರುತ್ತದೆ, ಇಲ್ಲದೇ ಇದ್ದರೆ ಚಿನ್ನವನ್ನು ಅಡವಿಟ್ಟು ತೆಗೆದುಕೊಡುತ್ತೇವೆ. ಆ ಬಗ್ಗೆ ದಾಖಲಾತಿ ಇದೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ.

23. ದಾವಾ ಆಸ್ತಿಯ ಸರ್ವೆ ನಂಬರ 21/4, 4 ಸೆಂಟ್ಸ್, 25/12, 5 ಸೆಂಟ್ಸ್ ಹಾಗೂ 17/12, 9 ಸೆಂಟ್ಸ್. ನಿಪಿ 1 ಆಗುವ ಮೊದಲು ದಾಖಲಾತಿಗಳನ್ನು ನೋಡಿರುತ್ತೇವೆ, ಆದರೆ ಆರ್.ಟಿ.ಸಿ.ಯನ್ನು ಅವರು ನೀಡಿರಲಿಲ್ಲ ಏಕೆಂದರೆ ಪ್ರತಿವಾದಿಯವರ ಹೆಸರಿಗೆ ಆರ್.ಟಿ.ಸಿ. ಆಗಿರಲಿಲ್ಲ. ಸಾಕ್ಷಿ ಮುಂದುವರೆದು ಆರ್.ಟಿ.ಸಿ. ಮಾಡಲು ಕೇಸು ಹಾಕಿದ್ದೇವೆ ಎಂದು ಪ್ರತಿವಾದಿ ನಮಗೆ ತಿಳಿಸಿದರು ಎಂದು ಹೇಳುತ್ತಾರೆ. ಆ ರೀತಿ ಆರ್.ಟಿ.ಸಿ ಇಲ್ಲದೇ ಇದ್ದರು ನಿಪಿ 1 ನ್ನು ಮಾಡಿಸಿಕೊಳ್ಳಲು ಕಾರಣವೇನು ಎಂದರೆ ಸಾಕ್ಷಿಯು ವಕೀಲರು ಆಶ್ವಾಸನೆ ನೀಡಿದ್ದರು ಎಂದು ಹೇಳುತ್ತಾರೆ. ದಿನಾಂಕಃ 10.10.2019 ಹಾಗೂ ಅದರ ನಂತರದ ಎರಡು ತಿಂಗಳವರೆಗೆ ಕ್ರಯದ ಉಳಿಕೆ ಮೊತ್ತ ನಮ್ಮ ಬಳಿ ಲಭ್ಯವಿತ್ತು. ಆ ಬಗ್ಗೆ ದಾಖಲಾತಿಯನ್ನು ಹಾಜರು ಪಡಿಸಬಹುದು.

24. ನಿಪಿ 1 ಪ್ರಕಾರ ಕ್ರಯ ಪತ್ರ ಮಾಡಿಕೊಟ್ಟಿಲ್ಲ ಎಂದು ನೀವು ನೋಟಿಸು ನೀಡಿದ್ದೀರಾ ಎಂದರೆ ಸಾಕ್ಷಿಯು ನಿಮ್ಮ ಸಹೋದ್ಯೋಗಿಯಾದ ಶ್ರೀಮತಿ. ಯು.ಎನ್.ಜಿ. ಮೂಲಕ ನೋಟಿಸು ನೀಡಿದ್ದೇವೆ ಎಂದು ಹೇಳುತ್ತಾರೆ. ಆದರೆ

ಪ್ರತಿವಾದಿಯವರು ಶಶಿಕಿರಣ ವಕೀಲರ ಬಳಿ ಇದ್ದ ಕಾರಣ ನಾನು ಅವರ ಬಳಿ ಹೋಗಿಲ್ಲ ಮತ್ತು ಈಗ ನನ್ನನ್ನು ಪ್ರತಿನಿಧಿಸುತ್ತಿರುವ ವಕೀಲರನ್ನು ಭೇಟಿ ಮಾಡಿಲ್ಲ. ಪ್ರತಿವಾದಿಯವರ ಬಳಿ ನಾನೇ ಖುದ್ದಾಗಿ ಮಾತನಾಡಿರುತ್ತೇನೆ. ನನ್ನೊಂದಿಗೆ ನನ್ನ ಪಾಲುದಾರರಾದ ಆಸೀಫ್ ರವರು ಬಂದಿದ್ದರು.

25. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ನಾನು ತಿಳಿದುಕೊಂಡಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ರೂ. 5,00,000/-ದ ಚೆಕ್ಕು ಅಮಾನ್ಯಗೊಂಡಿದ್ದು, ನಂತರ ನಾನು ಪ್ರತಿವಾದಿಯವರಿಗೆ ಹಣವನ್ನು ವರ್ಗಾವಣೆ ಮಾಡಿದ್ದೇನೆ ಎಂಬ ವಿಚಾರ ಸರಿ ಇದೆ. ಚೆಕ್ಕು ಮಾನ್ಯಗೊಂಡಿರುವ ವಿಚಾರ ಹಾಗೂ ನಾನು ಹಣ ವರ್ಗಾವಣೆ ಮಾಡಿರುವ ವಿಚಾರ ಎರಡು ಸಹಃ ಸರಿ ಇದೆ. ಸಾಕ್ಷಿ ಮುಂದುವರೆದು ರೂ. 5,00,000/-ದ ಚೆಕ್ಕು ಪ್ರತಿವಾದಿಯವರ ಬಳಿಯೇ ಇದೆ ಬದಲಾಗಿ ನಾನು ಅವರಿಗೆ ಹಣವನ್ನು ವರ್ಗಾವಣೆ ಮಾಡಿದ್ದೇನೆ ಎಂದು ಹೇಳುತ್ತಾರೆ. ನಾನು ಮೇಲೆ ಹೇಳಿರುವಂತೆ ಒಂದು ಚೆಕ್ಕು ಮಾನ್ಯಗೊಂಡಿರುವುದಿಲ್ಲ. ನಿಪಿ 1 ರ ಷರತ್ತುಗಳ ಪ್ರಕಾರ ನಿಗಧಿತ ದಿನಾಂಕದಂದು ನಮ್ಮ ಬಳಿ ಕ್ರಯ ಪತ್ರಕ್ಕೆ ಬೇಕಾದ ಉಳಿಕೆ ಮೊತ್ತ ಇರಲಿಲ್ಲ ಹಾಗಾಗಿ ಅವುಗಳ ಬಗ್ಗೆ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ. ಇದೆ.

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ